ನಿಯಮ-72
ಕ್ರಮಸಂಖ್ಯೆ-189

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 215 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 03.12.2021.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-72ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 189ಕ್ಕೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ: ಕವಿಪ/ಪ್ರಶಾ/189/144ನೇಅ/ನಿ-72/2021, ದಿನಾಂಕ: 22.09.2021.

---*---

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-72ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 189ಕ್ಕೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(signature)

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ

- - o - -

ವಿಷಯ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ಪಾಳ್ಯ ಕೈಗಾರಿಕಾ ಪ್ರದೇಶದ ಯೋಜನೆಗಾಗಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಪೋಲನಹಳ್ಳಿ ಗ್ರಾಮದ ಸರ್ವೆ ನಂ: 34/2 ಹಾಗೂ 33/2ರಲ್ಲಿ ಒಟ್ಟು 3 ಎಕರೆ 16½ ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಭೂಪರಿಹಾರ ಮೊತ್ತವನ್ನು ಖಾತೆದಾರರಿಗೆ ಪಾವತಿಸುವಲ್ಲಿ ಅನುಸರಿಸಬೇಕಾದ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ನಿಯಮಗಳನ್ನು ಪಾಲಿಸದೆ, ಕೆಲವೊಬ್ಬ ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಪರಿಹಾರ ಮೊತ್ತವನ್ನು ಪಾವತಿಸಿದ್ದು, ಉಳಿದವರಿಗೆ ಭೂಪರಿಹಾರ ಮೊತ್ತವನ್ನು ಪಾವತಿಸದೆ ತಾರತಮ್ಯವೆಸಗಿದ್ದು, ಇದರಿಂದ ಸಾಮಾಜಿಕ ನ್ಯಾಯವನ್ನು ಪಾಲಿಸಲಾಗಿಲ್ಲ. ಉಳಿದವರಿಗೂ ಭೂಪರಿಹಾರ ಮೊತ್ತವನ್ನು ಪಾವತಿಸುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ

ಪಾಳ್ಯ ಕೈಗಾರಿಕಾ ಪ್ರದೇಶಕ್ಕಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಪಾಳ್ಯ, ನಾಗನಾಯಕನಹಳ್ಳಿ, ಮುದ್ದೇನಹಳ್ಳಿ, ಹರಳೂರು ಮತ್ತು ಪೋಲನಹಳ್ಳಿ ಗ್ರಾಮಗಳ ಒಟ್ಟು 1202-05 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ದಿನಾಂಕ: 15.11.2018ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಮುದ್ದೇನಹಳ್ಳಿ, ನಾಗನಾಯ್ಕನಹಳ್ಳಿ ಮತ್ತು ಪಾಳ್ಯ ಗ್ರಾಮಗಳ ಪ್ರತಿ ಎಕರೆ ಜಮೀನಿಗೆ ರೂ.1.10 ಕೋಟಿ ಹಾಗೂ ಹರಳೂರು ಮತ್ತು ಪೋಲನಹಳ್ಳಿ ಗ್ರಾಮಗಳ ಪ್ರತಿ ಎಕರೆ ಜಮೀನಿಗೆ ರೂ.1.50 ಕೋಟಿಯಂತೆ ಪರಿಹಾರ ದರ ನಿಗದಿಪಡಿಸಿದ್ದು, ಭೂಪರಿಹಾರ ಪಾವತಿ ಕಾರ್ಯ ಪ್ರಗತಿಯಲ್ಲಿದೆ.

ವೈ.ಸಿ. ಶ್ರೀನಿವಾಸ್ ಬಿನ್ ಲೇ. ಚಿಕ್ಕಬಚ್ಚಪ್ಪ, ವೈ.ಸಿ. ನಾರಾಯಣಸ್ವಾಮಿ ಬಿನ್ ಲೇ. ಚಿಕ್ಕಬಚ್ಚಪ್ಪ, ವೈ.ಸಿ. ರಾಮಕೃಷ್ಣ ಬಿನ್ ಲೇ. ಚಿಕ್ಕಬಚ್ಚಪ್ಪ, ವೈ.ಸಿ. ರಮೇಶ್ ಬಿನ್ ಲೇ. ಚಿಕ್ಕಬಚ್ಚಪ್ಪ, ವೈ.ಸಿ.ಸುರೇಶ್ ಲೇ. ಚಿಕ್ಕಬಚ್ಚಪ್ಪ, ರವೀಂದ್ರ ಬಿನ್ ಲೇ. ಮರಿಯಪ್ಪ ಮತ್ತು ಕಿರಣ್ ಕುಮಾರ್ ಬಿನ್ ಲೇ. ಮರಿಯಪ್ಪ ಇವರುಗಳು ಪೋಲನಹಳ್ಳಿ ಗ್ರಾಮದ ಸರ್ವೆ ನಂ: 34/2 ರಲ್ಲಿನ 28 ಗುಂಟೆ ಮತ್ತು 33/2 ರಲ್ಲಿನ 2-28½ ಎಕರೆ ಜಮೀನಿನ ಅಧಿಸೂಚಿತ ಖಾತೆದಾರರಾಗಿರುತ್ತಾರೆ.

ಮೇಲಿನಂತೆ ಪ್ರಸ್ತಾವಿತ ಜಮೀನಿನ ಜಂಟಿ ಖಾತೆ ವೈ.ಸಿ.ಶ್ರೀನಿವಾಸ್ ಬಿನ್ ಲೇ. ಚಿಕ್ಕಬಚ್ಚಪ್ಪ ಮತ್ತು ಇತರರ ಹೆಸರಿನಲ್ಲಿ ನಮೂದಾಗಿದ್ದು ಈ ಪೈಕಿ ವೈ.ಸಿ.ಶ್ರೀನಿವಾಸ್ ಬಿನ್ ಲೇ. ಚಿಕ್ಕಬಚ್ಚಪ್ಪ ಇವರು ದಿನಾಂಕ: 12.01.2021ರಂದು ಭೂಪರಿಹಾರ ಪಾವತಿಸುವಂತೆ ಕೋರಿ ಮನವಿ ಸಲ್ಲಿಸಿ,

ದಿನಾಂಕ: 20.03.2021ರಂದು ನೋಟರಿ ಆಧಾರಿತ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ವಿಶೇಷ ಭೂಸ್ವಾಧೀನಾಧಿಕಾರಿಯವರ ಸಮಕ್ಷಮ ಹಾಜರಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಮೇಲ್ಕಂಡ ಜಮೀನಿನ ಪರಿಹಾರ ಪಾವತಿಸಲು ಇತರ ಖಾತೆದಾರರು ಒಪ್ಪಿರುವುದಾಗಿ ತಿಳಿಸಿರುತ್ತಾರೆ.

ಸದರಿ ಕೋರಿಕೆಯ ಮೇರೆಗೆ ದಿನಾಂಕ: 26.03.2021ರಂದು ಪೋಲನಹಳ್ಳಿ ಗ್ರಾಮದ ಸರ್ವೆ ನಂ: 33/2 ರ 2-26.8 ಎಕರೆ ಜಮೀನಿಗೆ ರೂ.2,92,87,500/-ಗಳನ್ನು ಮತ್ತು ದಿನಾಂಕ: 20.04.2021ರಂದು ಸರ್ವೆ ನಂ: 34/2ರ 28 ಗುಂಟೆ ಜಮೀನಿಗೆ ರೂ.77,00,000/-ಗಳನ್ನು ವೈ.ಸಿ. ಶ್ರೀನಿವಾಸ್ ಇವರಿಗೆ ಆರ್.ಟಿ.ಜಿ.ಎಸ್. ಮುಖಾಂತರ ಪಾವತಿಸಿರುವುದಾಗಿ ವಿಶೇಷ ಭೂಸ್ವಾಧೀನಾಧಿಕಾರಿಯವರು ವರದಿ ಮಾಡಿರುತ್ತಾರೆ.

ತದನಂತರ, ಸದರಿ ಜಮೀನಿನ ಭೂಪರಿಹಾರ ಪಾವತಿ ಬಗ್ಗೆ ರಮೇಶ್ ವೈ.ಸಿ. ಬಿನ್ ಲೇ. ಚಿಕ್ಕಬಚ್ಚಪ್ಪ ಮತ್ತು ಸುರೇಶ್ ವೈ.ಸಿ. ಬಿನ್ ಚಿಕ್ಕಬಚ್ಚಪ್ಪ ಇವರು ಆಕ್ಷೇಪ ವ್ಯಕ್ತಪಡಿಸಿ, ವಿಶೇಷ ಭೂಸ್ವಾಧೀನಾಧಿಕಾರಿಯವರ ಕಛೇರಿಗೆ ಸಲ್ಲಿಸಿದ ದಿನಾಂಕ: 09.06.2021 ಮತ್ತು 17.06.2021ರ ಮನವಿಗಳಲ್ಲಿ ತಮ್ಮ ಸಹಿಯನ್ನು ನಕಲು ಮಾಡಿ ಪರಿಹಾರವನ್ನು ಪಡೆದಿದ್ದು, ತಮಗೆ ಹಾಗೂ ತಮ್ಮ ಸಹೋದರರಿಗೆ ಈ ಜಮೀನಿನಲ್ಲಿ ಸಮ ಭಾಗವಿದ್ದು ಅದರಂತೆ ಪರಿಹಾರವನ್ನು ಪಾವತಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿ-2 ಇವರು ದಿನಾಂಕ: 17.06.2021ರಂದು ಕ್ಲೇಮ್‌ದಾರರು ಮತ್ತು ದೂರುದಾರರಿಗೆ ನೋಟೀಸ್ ಜಾರಿ ಮಾಡಿ ದಿನಾಂಕ 21.06.2021ರಂದು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಉಭಯತ್ರರರು ರಾಜಿ ಸಂಧಾನ ಮಾಡಿಕೊಂಡಿದ್ದು, ದಿನಾಂಕ 28.06.2021ರಂದು ಸದರಿಯವರ ಕಛೇರಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಮುಂದೆ ಏನೇ ತಂಟೆ, ತಕರಾರುಗಳು ಬಂದಲ್ಲಿ ತಾವುಗಳೇ ಬಗೆಹರಿಸಿಕೊಳ್ಳುವುದಾಗಿ ಹಾಗೂ ಈ ಕುರಿತು ತಕರಾರು ಅರ್ಜಿಯನ್ನು ಸಲ್ಲಿಸುವುದಾಗಲೀ, ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದಾಗಲೀ, ದಾವೆ ದಾಖಲು ಮಾಡುವುದಾಗಲೀ ಅಥವಾ ನ್ಯಾಯಾಲಯಗಳಲ್ಲಿ ಭಾಗಾಂಶಕ್ಕೆ ದಾವೆ ಹೂಡುವುದಾಗಲೀ ಮಾಡುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆಂದು ವಿಶೇಷ ಭೂಸ್ವಾಧೀನಾಧಿಕಾರಿಯವರು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪೋಲನಹಳ್ಳಿ ಗ್ರಾಮದ ಸರ್ವೆ ನಂ: 34/2 ಮತ್ತು 33/2 ರ ಭೂಪರಿಹಾರ ಪಾವತಿ ಪ್ರಕ್ರಿಯೆಯ ಕಾರ್ಯ ಪೂರ್ಣಗೊಂಡಿರುತ್ತದೆ.

ಸಂಖ್ಯೆ: ಸಿಐ 215 ಐಎಪಿ (ಇ) 2021

(ಮುರುಗೇಶ್ ಆರ್.ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು